ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಹೇಳ್ರಿ, ಬರಗಾಲ ಬಂದಿರುವ ಇವತ್ತು ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : NREGS, ಆಶ್ರಯ ಯೋಜನೆಗಳಿಗೆ, ಕುಡಿಯುವ ನೀರಿಗೆ ಎಲ್ಲಾ ಕೇಂದ್ರ ಸರ್ಕಾರದ ಹಣ. CRF ಗೆ ಅವರ ಹಣ. ಒಂದು ರೂಪಾಯಿ ನಿಮ್ಮ ಹಣ ಇಲ್ಲ. ಯಾರಿಗೆ ಹೇಳುತ್ತಿದ್ದೀರಿ ನೀವು? ಲೆಕ್ಕವನ್ನು ಕೊಡಿ ನೋಡೋಣ? ನೀವು ಎಷ್ಟು ಖರ್ಚು ಮಾಡಿದ್ದೀರಿ ಹೇಳಿ? ಈ ಸರ್ಕಾರ ರೈತರ ವಿರೋಧಿ ಸರ್ಕಾರ, ಬಡವರ ವಿರೋಧಿ ಸರ್ಕಾರ, ಇವರಿಗೆ ಅಧಿಕಾರ ನಡೆಸುವುದಕ್ಕೆ ಯಾವುದೇ ನೈತಿಕ ಹಕ್ಕಿಲ್ಲ. ನೀವು ಕೊಟ್ಟಿರುವುದು. ಮೂಗಿಗೆ ತುಪ್ಪ ಹಚ್ಚುವ ಕೆಲಸವನ್ನು ಮಾಡುತ್ತಿದ್ದೀರಿಯೇ ವಿನಃ ಪರಿಹಾರ ಕೊಡುವ ಕೆಲಸ ಮಾಡಿಲ್ಲ. ನೆನ್ನೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಸಾರ್ವಜನಿಕರಿಗೆ 10,000 ಕೋಟಿ ರೂ.ಗಳು ಸಿಕ್ಕಿತೆಂದು ಪಾಪ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾನ್ಯ ಯಡಿಯೂರಪ್ಪನವರು ಮಾಡಿರುವ ಮುಖ್ಯಮಂತ್ರಿಗಳಿಂದ 10,000 ಕೋಟಿ ರೂ.ಗಳು ಸಿಕ್ಕಿತೆಂದು ಪಾಪ ಆಸೆ ಇಟ್ಟುಕೊಂಡಿದ್ದರು. ಇದನ್ನು ತೀವ್ರವಾಗಿ ನಮ್ಮ ಪಕ್ಷ ಪ್ರತಿಭಟನೆ ಮಾಡಿ, ರೈತರ ಬಗ್ಗೆ ಕಾಳಜಿ ಇಲ್ಲ. ಬಡವರ ಬಗ್ಗೆ ಕಾಳಜಿ ಇಲ್ಲ ಎಂದು ಹೇಳಿ, ಈ ಸರ್ಕಾರಕ್ಕೆ ಧಿಕ್ಕಾರ ಧಿಕ್ಕಾರ ಎಂದು ಹೇಳಿ ಸದನದಿಂದ ಹೊರ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಸದನದಿಂದ ನಿರ್ಗಮಿಸಿದರು)

(ಗೊಂದಲ)

ಅಧ್ಯಕ್ಷರು : ಮಾನ್ಯ ಹೆಚ್.ಡಿ. ರೇವಣ್ಣನವರು, ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಸುಮಾರು 50 ಪುಟಗಳನ್ನು ಗುರುತು ಹಾಕಿಕೊಂಡು ಬಂದಿದ್ದರೇನೋ ನನಗೆ ಗೊತ್ತಿಲ್ಲ. ಟೈಪ್ ಮಾಡಿರುವ ಕಾಪಿಯನ್ನು ಇಟ್ಟುಕೊಂಡು ಕ್ಲೀನ್ ಆಗಿ ಓದಿ ಹೇಳಿದ್ದೀರಿ ಬಹಳ ಸಂತೋಷ. ಮಾನ್ಯ